**ದಿನಾಂಕ: 12.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಸಿ ಎಂ ಎನ್., ಎದುರುದಾರರ ಪರ ವಕೀಲರಿಂದ**

**2.** ನಾನು ಹಾಗೂ ಎದುರುದಾರನು ಪ್ರೀತಿಸಿ ಮದುವೆ ಆಗಿರುತ್ತೇವೆ ಎಂದರೆ ಸರಿ. ಕೋಲಾರ ಹಾಗೂ ಚಿಂತಾಮಣಿ ಮಧ್ಯದಲ್ಲಿರುವ ಆಂಜನೇಯ ದೇವಸ್ಥಾನದಲ್ಲಿ ನಮ್ಮ ಮದುವೆ ಆಗಿರುತ್ತದೆ. ನಾವಿಬ್ಬರೇ ಓಡಿ ಹೋಗಿ ಹಿಂದೂ ಸಂಪ್ರದಾಯದಂತೆ ಸರಳ ಮದುವೆ ಆಗಿರುತ್ತೆವೆ ಎಂದರೆ ಸರಿ. ನಮ್ಮ ಮದುವೆಯಲ್ಲಿ ನಾವಿಬ್ಬರು ಬಿಟ್ಟರೇ ನಮ್ಮ ಕಡೆಯವರು ಯಾರು ಇರಲಿಲ್ಲ ಎಂದರೆ ಸರಿ. ನಮ್ಮ ಮದುವೆಗೆ ನಮ್ಮ 5 ಜನ ಸ್ನೇಹಿತರು ಇದ್ದರೂ.

**3.** ಮದುವೆಯಾದ ನಂತರ ನಾನು ಹಾಗೂ ನನ್ನ ಗಂಡ ಅವರ ಊರಾದ ಚಿಂತಾಮಣಿ ತಾಲೂಕಿನ ಮಿಟ್ಟಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೆವು. ಮದುವೆಯಾದ 3 ತಿಂಗಳು ನನ್ನ ಗಂಡನ ಮನೆಯಲ್ಲಿ ಇದ್ದೆವು. ನಮ್ಮ ಮದುವೆಗೆ ನನ್ನ ತಂದೆ ತಾಯಿಯ ಒಪ್ಪಿಗೆ ಇರಲಿಲ್ಲ ಎಂದರೆ ಸರಿ. ಮದುವೆ ಮಾಡಿಕೊಳ್ಳುವುದು ಬೇಡ ಎಂದು ನನ್ನ ತಂದೆ ತಾಯಿ ತಿಳುವಳಿಕೆ ಹೇಳಿದ್ದರು ಎಂದರೆ ಸರಿ. ಆದರೂ ನಾನು ಸ್ವಇಚ್ಚೆಯಿಂದ ಮದುವೆ ಆಗಿರುತ್ತೇನೆಂದರೆ ಸರಿ. ನಾವು ಬೆಂಗಳೂರಿನ ಕಾಡುಗೋಡಿಯಲ್ಲಿ 3-4 ತಿಂಗಳು ಪ್ರತ್ಯೇಕ ಮನೆಯಲ್ಲಿ ವಾಸ ಇದ್ದೆವು ಎಂದರೆ ಸರಿ. ನಮ್ಮ ಸಂಬಂದಿಕರು ಕಾಡುಗೋಡಿಯಲ್ಲಿದ್ದರು ಎಂದರೆ ಸರಿಯಲ್ಲ.

**4.** ಬೆಂಗಳೂರಿನಲ್ಲಿ ನನ್ನ ಗಂಡನ ತಂದೆ ತಾಯಿ ಅಂದರೆ ನನ್ನ ಅತ್ತೆ ಮಾವ ನನ್ನ ನಡುವೆ ಗಲಾಟೆ ಆಗಿತ್ತು ಎಂದರೆ ಸರಿ, ಸಾಕ್ಷಿಯೂ ನಾನು ಗಲಾಟೆ ಮಾಡಿರುವುದಿಲ್ಲ ಅವರೇ ಮಾಡಿದ್ದು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಪೋಲಿಸರಿಗೆ ದೂರನ್ನು ನೀಡಿಲ್ಲ. ಆದಾದ ನಂತರ ನಾನು ಹಾಗೂ ನನ್ನ ಗಂಡ ನನ್ನ ಅಜ್ಜಿಯ ಊರಾದ ಚಿಕ್ಕನಹಳ್ಳಿ ಗ್ರಾಮದಲ್ಲಿ ಪ್ರತ್ಯೇಕ ಮನೆ ಮಾಡಿಕೊಂಡು ವಾಸವಾಗಿದ್ದೆವು. ನನ್ನ ತಾತ ಅಜ್ಜಿ ಪ್ರತ್ಯೇಕ ಮನೆ ಮಾಡಿಕೊಟ್ಟು ನಮ್ಮನ್ನು ಇರಿಸಿದ್ದರು ಎಂದರೆ ಸರಿ. ನಾವು ವಾಸ ಇದ್ದ ಮನೆಯ ಅಕ್ಕಪಕ್ಕದಲ್ಲಿ ಬೇರೆ ಮನೆಗಳು ಇರುತ್ತವೆ. ನಮ್ಮ ಮನೆಯ ಪಕ್ಕದಲ್ಲಿ ನನ್ನ ಚಿಕ್ಕಪ್ಪ ನಾಗರಾಜ್, ಮುನಿರಾಜು, ಭಾರತಿ ಹಾಗೂ ನನ್ನ ಚಿಕ್ಕಮ್ಮ ಸತ್ಯವೇಣಮ್ಮ ಇದ್ದರೂ. ಮೇಲಿನವರೊಂದಿಗೆ ನಾನು ಮಾತನಾಡುತ್ತಿರಲಿಲ್ಲ ಕಾರಣ ಅವರು ನ್ನನೊಂದಿಗೆ ಅನ್ಯೋನ್ಯವಾಗಿರಲಿಲ್ಲ. ನಮ್ಮ ಪಕ್ಕದ ಮನೆಯವರಾದ ಭಾರತಿ ರವರೊಂದಿಗೆ ಅನ್ಯೋನ್ಯವಾಗಿದ್ದೆವು.

**5.** ಚಿಕ್ಕನಳ್ಳಿ ಗ್ರಾಮದಲ್ಲಿ ಸುಮಾರು 6 ತಿಂಗಳು ಅನ್ಯೋನ್ಯವಾಗಿ ಸಂಸಾರ ನಡೆಸಿರುತ್ತೇವೆ ಎಂದರೆ ಸರಿ. ತದನಂತರ ನಾವು ಮುಳಬಾಗಿಲಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ಇದ್ದೆವು ಎಂದರೆ ಸರಿಯಲ್ಲ. ನಾನು 5 ತಿಂಗಳ ಗರ್ಭಿಣಿ ಇದ್ದಾಗ ತವರು ಮನೆಗೆ ಬಂದಿರುತ್ತೇನೆ. ನನ್ನ ಅಪ್ಪ ಅಮ್ಮ ನನ್ನ ಗಂಡನನ್ನು ಸರಿಯಾಗಿ ಮಾತನಾಡಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯೂ ನನ್ನ ಗಂಡನೇ ಮಾತನಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ.

**6.** ನಾನು 5 ತಿಂಗಳ ಗರ್ಭಿಣಿ ಇದ್ದಾಗ ತವರು ಮನೆಗೆ ನನ್ನ ಗಂಡ ನನ್ನ ಜೊತೆ ಬಂದಿದ್ದನು. ನನಗೆ ಡೆಲಿವರಿ ಅದ ತನಕ ನಮ್ಮ ಮನೆಯಲ್ಲಿಯೇ ನನ್ನ ಗಂಡ ಇದ್ದರೂ. ಆ ಸಮಯದಲ್ಲಿ ನಮ್ಮ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿ.

**7.** ನನ್ನ ಮದುವೆ ಸಮಯದಲ್ಲಿ ನನ್ನ ಬಳಿ ಕಿವಿ ಓಲೆ, ಕಾಲು ಗೆಜ್ಜೆ ಇದ್ದವು. ಮದುವೆ ಆದ ಸಮಯದಲ್ಲಿ ನನ್ನ ತಂದೆ ತಾಯಿ ಯಾವುದೇ ಹಣ ಹಾಗೂ ಬಂಗಾರವನ್ನು ನೀಡಿರುವುದಿಲ್ಲ ಎಂದರೆ ಸರಿ. ಮದುವೆ ಸಮಯದಲ್ಲಿ ಬೇಕಾದ ತಾಳಿ, ಕಾಲು ಉಂಗುರ ತೆಗೆದುಕೊಳ್ಳಲು ನಾನೇ ಕೊಟ್ಟಿರುತ್ತೇನೆ. ಮದುವೆ ಸಮಯದಲ್ಲಿ ನನ್ನ ಗಂಡ ಹೊಸಕೋಟೆಯ ಯಾವುದೋ ಬಂದು ಮಾರ್ಟ್ ನಲ್ಲಿ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದನು. ಮದುವೆ ಆದ ನಂತರ ಕಾಡುಗೋಡಿಯಲ್ಲಿ ಚಿಕ್ಕ ಹೊಟೇಲ್ ಇಟ್ಟುಕೊಂಡಿದ್ದನು.

**8.** ನನ್ನ ಅಜ್ಜಿ ಊರಾದ ಚಿಕ್ಕನಳ್ಳಿ ಹಾಗೂ ನನ್ನ ತವರು ಮನೆಯಲ್ಲಿ ವಾಸ ಇದ್ದಾಗ ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಮನೆ ಖರ್ಚಿಗೆ ಹಣ ನಾನೇ ಕೊಡುತ್ತಿದ್ದೆ. ನಾನು ಗರ್ಭಿಣಿ ಆಗುವ ತನಕ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ. ನಾನು ವಿಜಿಯಣ್ಣ, ಗುರಪ್ಪ ಹಾಗೂ ಗೋಪಾಲ್ ಎಂಬುವವರ ತೋಟದಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ.

**9.** ನನ್ನ ಗಂಡನ ತಂದೆ ತಾಯಿಯವರೆಗೆ ವಯಸ್ಸಾಗಿದೆ ಎಂದರೆ ಸಾಕ್ಷಿಯೂ ನನ್ನ ಮಾವ 50 ವರ್ಷವಾಗಿರಬಹುದು ನನ್ನ ಅತ್ತೆಗೆ ಚೆನ್ನಾಗಿದ್ದಾರೆ ಎಂದು ನುಡಿಯುತ್ತಾರೆ. ನಾವು ಬೆಂಗಳೂರಿನಲ್ಲಿದ್ದಾಗ ನನ್ನ ಮಾವ ಅಡುಗೆ ಮಾಡುವ ಕೆಲಸ ಮಾಡುತ್ತಿದ್ದರು. ನನ್ನ ಅತ್ತೆ ಮನೆಕೆಲಸಗಳಿಗೆ ಹೋಗುತ್ತಿದ್ದರು. ನನ್ನ ಅತ್ತೆ ಮಾವ ಈಗ ಏನೂ ಕೆಲಸ ಮಾಡುತ್ತಿದ್ದಾರೆ ನನಗೆ ಗೊತ್ತಿಲ್ಲ.

**10.** ನನ್ನ ಅತ್ತೆಗೆ ಬ್ರೆಸ್ಟ್ ಕ್ಯಾನ್ಸರ್ ಆಗಿ ಚಿಕಿತ್ಸೆ ಪಡೆಯುತ್ತಿರುವ ಕುರಿತು ನನಗೆ ಗೊತ್ತಿರುವುದಿಲ್ಲ. ನನ್ನ ಅತ್ತೆ ಮಾವನವರ ಯೋಗ ಕ್ಷೇಮಗಳನ್ನು ನನ್ನ ಗಂಡ ಒಬ್ಬನೇ ಮಾಡಬೇಕು ಎಂದರೆ ಸರಿ. ಅವರಿಗೆ ಆತ ಒಬ್ಬನೇ ಮಗ ಎಂದರೆ ಸರಿ.

**11.** ಈಗ ನನ್ನ ಗಂಡ ಚಿಂತಾಮಣಿ ಒಂದು ಹೊಟೇಲ್ ನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಈಗ ತವರು ಮನೆಯಲ್ಲಿದ್ದೆನೆಂದರೆ ಸರಿ.

**12.** ನನ್ನ ತಂದೆಗೆ ವಯಸ್ಸಾಗಿರುವುದರಿಂದ ಯಾವುದೇ ಕೆಲಸ ಮಾಡುವುದಿಲ್ಲ. ನನ್ನ ತಂದೆ ತಾಯಿಗೆ ಜಮೀನುಗಳು ಇರುವುದಿಲ್ಲ. ನನ್ನ ತಂದೆ, ತಾಯಿ ಹಾಗೂ ಸಹೋದರರು ಎಲ್ಲರೂ ವ್ಯವಸಾಯದಿಂದ ಸಾಕಷ್ಟು ಆದಾಯ ಇರುತ್ತದೆ ಎಂದರೆ ಸರಿಯಲ್ಲ.

(ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.